**Kannada Prabha**

**Date:** March 26, 2014 **Page No.** 11

**Edition:** Mysore **Language:** English

# ಚಾಲನೆ

ಮೈಸೂರು: ಎಸ್‌ಡಿಎಂಐಎಂಡಿ ಸಂಸ್ಥೆಯ ವಿದ್ಯಾರ್ಥಿಗಳ ನಿಯತಕಾಲಿಕ ಡೈಮೆನ್ಶಂಸ್‌ನ ಡಿಜಿಟಲ್ ಅವತರಣಿಕೆಗೆ ಎಸ್‌ಡಿಎಂ ಎಜುಕೇಶನಲ್ ಟ್ರಸ್ಟ್‌ನ ಕಾರ್ಯದರ್ಶಿ ಪ್ರೊ.ಎಸ್. ಪ್ರಭಾಕರ್ ಚಾಲನೆ ನೀಡಿದರು. ನಂತರ ಅವರು ಮಾತನಾಡಿ, ಕಾಗದ ಉಳಿಸುವ ಮೂಲಕ ನಿಸರ್ಗವನ್ನು ರಕ್ಷಿಸುವ ಇ-ಡೈಮನ್ಶಂಸ್ ಪ್ರಾರಂಭದ ಬಗ್ಗೆ ಶ್ಲಾಘಿಸಿದರು. ಉತ್ತಮ ಲೇಖನಗಳು ಮತ್ತು ವ್ಯವಹಾರ ನಿರ್ವಹಣ ಕ್ಷೇತ್ರದ ದಿಗ್ಗಜರೊಂದಿಗೆ ನಡೆಸಿದ ಸಂದರ್ಶನಗಳನ್ನೂ ಪ್ರಕಾಶಿಸುವುದರ ಮೂಲಕ ಇ-ಡೈಮೆನ್ಶಂಸ್ ವ್ಯವಹಾರ ನಿರ್ವಹಣ ವಿದ್ಯಾರ್ಥಿಗಳು ಮತ್ತು ಉದ್ಯಮ ವರ್ಗದ ನಡುವೆ ಸೇತುವೆಯಾಗಲಿದೆ ಎಂದು ಹೇಳಿದರು. ಇ- ಡೈಮನ್ಶಂಸ್ ಅನ್ನು ಮುಕ್ತವಾಗಿ www.sdmimd.net/dimensions ಈ ಲಿಂಕ್‌ನಲ್ಲಿ ಓದಬಹುದು. ಸಾಂಪ್ರದಾಯಿಕ ಪುಸ್ತಕ ರೂಪದಲ್ಲಿ 1999 ರಿಂದ ಪ್ರಕಾಶಿತಗೊಳ್ಳುತ್ತಿದ್ದ ಡೈಮೆನ್ಶಂಸ್ ಈಗ ಅಂತರ್ಜಾಲದ ಮೂಲಕ ಹೆಚ್ಚು ಓದುಗರನ್ನು ತಲುಪಲಿದೆ. ಡಿಜಿಟಲ್ ಅವರತರಣೆಯ ಮೊದಲೆಯ ಸಂಚಿಕೆಯಲ್ಲಿ ಉದ್ಯಮಶೀಲತೆ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಪ್ರಾಮುಖ್ಯತೆ ಕೊಡಲಾಗಿದೆ.

Launch of E-Dimensions